# ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟದೆ)

ರವರ ಕಛೇರಿ
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ಉಪ-ವಿಭಾಗ
ಹೂವಿನ ಹಡಗಲಿ-583219

ದೂರವಾಣಿ ಸಂಖ್ಯೆ / ಫ್ಯಾಕ್ಸ್ ಸಂಖ್ಯೆ: 08399-240788 ಈಮೇಲ್:aeegescomhadagali@gmail.com


ಸಂಖ್ಯೆ :ಸಕಾನಿಅ(ವಿ)/ಸ.ಇಂ(ತಾ)/ಹಡಗಲಿ/2021-22/ 3715 ದಿನಾಂಕ: 17/12/2021

## ಹೂವಿನ ಹಡಗಲಿ ಉಪ-ವಿಭಾಗದ ಗ್ರಾಹಕರ ಸಂವಾದ ಸಭೆ

ದಿನಾಂಕ: 17-12-2021 ರಂದು ಉಪ-ವಿಭಾಗದಲ್ಲಿ ವ್ಯಾಪ್ತಿಯ ಶಾಖಾಧಿಕಾರಿಗಳು ಕಂದಾಯ ಸಿಬ್ಬಂದಿ ಮತ್ತು ಆದರಣೀಯ ಗ್ರಾಹಕರ ಸಮ್ಮೂಖದಲ್ಲಿ ಗ್ರಾಹಕರ ವಿದ್ಯುತ್ ಸರಬರಾಜು ಕುಂದುಕೊರೆತ ಸಭೆಯನ್ನು ನಡೆಸಲಾಯಿತು ಪ್ರಾರಂಭದಲ್ಲಿ ಉಪ-ವಿಭಾಗದ ಪರವಾಗಿ ಸಭೆಗೆ ಹಾಜರಾದ ಎಲ್ಲಾರಿಗೂ ಸ್ವಾಗತಿಸಲಾಯಿತು, ಮುಂದುವರೆದು ಗ್ರಾಹಕರ ಸಮಸ್ಯೆಗಳನ್ನು ಖಂಡಿಕೆವಾರು ಅಲಿಸುತ್ತಾ ಪ್ರತಿ ಸಮಸ್ಯೆಗೂ ಕೈಗೊಳ್ಳುವ ಕ್ರಮವನ್ನು ಸಂಬಂಧಿಸಿದ ವಿವರಣೆ ನೀಡಿದ್ದರು.






(1) ಶ್ರೀ ಮೌನೇಶ್ ಅಂಕ್ಲಿ- 9743055195

ಸಮಸ್ಯೆ: ಅಂಕ್ಲಿ, ಅಂಕ್ಲಿತಾಂಡ ಗ್ರಾಮಗಳಿಗೆ ಸುಮಾರು ತಿಂಗಳಿನಿಂದ ಕ್ಯಾಂಪ್ ಲೈನ್ ಮ್ಯಾನ್ ಇರುವುದಿಲ್ಲ.

ಉತ್ತರ: ಅತೀ ಶೀಘ್ರದಲ್ಲಿ ಶಾಖಾಧಿಕಾರಿ ಮತ್ತು ಮೇಲಾಧಿಕಾರಿಗಳ ಜೊತೆಗೆ ಚರ್ಚಿಸಿ ಕ್ರಮಕೈಗಳ್ಳಲಾಗುವುದು.

(2) ಶ್ರೀಮತಿ. ಲಕ್ಷ್ಮಿಬಾಯಿ ಗಂಡ ಶಂಕರ್‌ನಾಯ್ಕ-9945223358

ಸಮಸ್ಯೆ: ನಮ್ಮ ಮನೆಯ ಮೇಲೆ ವಿದ್ಯುತ್ ತಂತಿ ಹಾದು ಹೋಗಿದ್ದು ಸ್ಥಳಾಂತರಿಸಗೊಳಿಸಲು ತಿಳಿಸಿದರು.

ಉತ್ತರ: ಶಾಖಾಧಿಕಾರಿಗಳಗೆ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ವಿಭಾಗೀಯ ಕಛೇರಿಯಿಂದ ಕಾರ್ಯಧೇಶ ಪಡೆದು ಕೆಲಸ ಕೈಗೆತ್ತಿಕೊಳ್ಳಲಾಗುವುದು.

(3) ಶ್ರೀ ದೀಪ್ಲಾನಾಯ್ಕ-8746808499

ಸಮಸ್ಯೆ: ಅಕ್ರಮ-ಸಕ್ರಮ ಯೋಜನೆಯಡಿ 2017ನೇ ಸಾಲಿನಲ್ಲಿ ಹಣ ಪಾವತಿಸಿ ಆರ್.ಆರ್.ಸಂ ಪಡೆಯಲಾಗಿದೆ ಆದರೆ ನಮ್ಮ ಪಂಪ್ ಸೆಟ್‌ಗೆ ವಿದ್ಯುತ್ ಮಾರ್ಗ ನಿರ್ಮಾಣವಾಗಿರುವುದಿಲ್ಲ.

ಉತ್ತರ:ಈಗಾಗಲೇ ಅಂದಾಜು ಪಟ್ಟಿ ತಯಾರಿಸಲಾಗಿದ್ದು ಟೆಂಡರ್ ಮುಖಾಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

(4) ಶ್ರೀ ಗೀಲ್ಯಾನಾಯ್ಕ

ಸಮಸ್ಯ: ಅಕ್ರಮ-ಸಕ್ರಮದ ಶೀಘ್ರ ಯೋಜನೆಯಡಿಯಲ್ಲಿ ಮಂಜೂರಾತಿಯಾಗಿದ್ದು ಪರಿವರ್ತಕವನ್ನು ನೀಡಿರುವುದಿಲ್ಲ

ಉತ್ತರ: ಪರಿವರ್ತಕವನ್ನು ವಿತರಿಸಲು ಕ್ರಮ ಕೈಗೊಳ್ಳುಲಾಗುವುದು.

(5) ಶ್ರೀ ಸುಭಾನ್‌ಸಾಬ್ ಹಡಗಲಿ-9945814365

ಸಮಸ್ಯೆ: ಹಡಗಲಿ ಪಟ್ಟಣದ 9ನೇ ವಾರ್ಡ್‌ನ ಸುಮಾರು 25 ಮನೆಗಳ ಮೇಲೆ ಸುಮಾರು ವರ್ಷದಿಂದ ವಿದ್ಯುತ್ ಸರಬರಾಜು ಇಲ್ಲದ ಮಾರ್ಗವನ್ನು ತೆಗೆದು ಹಾಕಲು ತಿಳಿಸಿದರು.

ಉತ್ತರ: ಅತೀ ಶೀಘ್ರದಲ್ಲಿ ಸ್ಥಳ ಪರಿಶೀಲನೆ ಮಾಡಿ ಕ್ರಮಕೈಗೊಳ್ಳಲಾಗುವುದು.

ಅಂತ್ಯದಲ್ಲಿ ಸಭೆಗೆ ಭಾಗವಹಿಸಿದ ಎಲ್ಲಾರಿಗೂ ಧನ್ಯವಾದ ತಿಳಿಸಿ, ಎಲ್ಲರೂ ಕಡ್ಡಾಯವಾಗಿ ವಿದ್ಯುತ್ ಸುರಕ್ಷತೆ ಬಗ್ಗೆ, ಜಾಗೃತರಾಗಿರಿ ಎಂದು ಹೇಳಿ ಸಭೆ ಮುಗಿಸಲಾಯಿತು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನ ಉಪ-ವಿಭಾಗ
ಗು.ವಿ.ಸ.ಕಂ.ನಿ. ಹೂವಿನ ಹಡಗಲಿ

ಪ್ರತಿಯನ್ನು

1) ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಗು.ವಿ.ಸ.ಕಂ.ನಿ ಹೆಚ್.ಬಿ.ಹಳ್ಳಿ ಇವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.